**ಪಿ .ಡಬ್ಯೂ-1**

**ಇಂದು ದಿನಾಂಕ 17.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲು - 3 ಎ ಮತ್ತು ಬಿ ಪ್ರತಿವಾದಿ ಪರ ವಕೀಲರಿಂದ**

ಈ ದಾವೆಯನ್ನು ಎಷ್ಟು ಜನರ ವಿರುದ್ಧ , ಯಾರ ವಿರುದ್ಧ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತು. ನಾನು ಯಾರ ವಿರುದ್ಧ ದಾವೆ ಸಲ್ಲಿಸಿದ್ದೇನೆ ಎಂದು ಅವರ ಹೆಸರುಗಳು ನನಗೆ ಅಷ್ಟೊಂದು ನೆನಪಿಲ್ಲ. ದಾವಾಸ್ವತ್ತು ಇಂಡಿಯಿಂದ 5 ಕಿ. ಮಿ. ಅಂತರದಲ್ಲಿವೆ . ಮೂರು ಜಾಗಗಳು ದಾವಾ ಆಸ್ತಿ ಇವೆ. ದಾವಾಮನೆಗಳು ಇಂಡಿಯ ಶಾಂತೇಶ್ವರ ದೇವಸ್ಥಾನದ ಪಕ್ಕದಲ್ಲಿವೆ ಎಂದರೆ ಸರಿ . ದಾವಾಆಸ್ತಿ ಮನೆ ನಂಬರ್ 554/1, ಇನ್ನೊಂದು ಮನೆ ನಂಬರ್ 554/2 ಎ/ಎ/2 . ಇನ್ನೊಂದು ಮನೆ ನಂಬರ್ ಬೇರೆ ಇದೆ ಅದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ . ಮನೆಯ ಸಂಖ್ಯೆ 554/1 ಆರ್.ಸಿ.ಸಿ ಕಟ್ಟಡ ಇದೆ. ಅದು ಶಾಂತೇಶ್ವರ ದೇವಸ್ಥಾನದ ಪಕ್ಕದಲ್ಲಿ ಇದೆ. ದಾವಾಆಸ್ತಿ ಸಂಖ್ಯೆ 554/2 ಎ/ಎ/2 ರಲ್ಲಿ ಮೂರು ಅಂಗಡಿಗಳಿವೆ, ಅವುಗಳ ಅಳತೆ ನನಗೆ ಗೊತ್ತಿಲ್ಲ. ಆ ಮೂರು ಅಂಗಡಿಗಳನ್ನು ಬಾಡಿಗೆಗಾಗಿ ನೀಡಲಾಗಿದೆ ಎಂದರೆ ಸರಿ . 1 ನೇ ದಾವಾ ಮನೆಯಲ್ಲಿ 2 ನೇ ಪ್ರತಿವಾದಿ ಇರುತ್ತಾನೆ ಎಂದರೆ ಸರಿ . ದಾವಾಮನೆ ಮತ್ತು ಅಂಗಡಿಗಳು ಮೊದಲು ಹಳೆ ಕಟ್ಟಡಗಳಿದ್ದವು ಅವುಗಳನ್ನು ಬೀಳಿಸಿ ನಮ್ಮ ತಂದೆ ಹೊಸ ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿ . ಅವುಗಳನ್ನು ಕಟ್ಟಲು ರೂ. 70 ರಿಂದ 80 ಲಕ್ಷ ಖರ್ಚಾಗಿದೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯು ನಾಲ್ಕುವರೆ ಎಕರೆ ಜಮೀನು ತೆಗೆದುಕೊಂಡಿದ್ದಾನೆ. ಆತನು ಯಾವ ಸಲಿನಲ್ಲಿ ಖರೀದಿ ತೆಗೆದುಕೊಂಡಿದ್ದಾನೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿ.ಪಿ-18 ನ್ನು ತೋರಿಸಿ ಅದರಲ್ಲಿರುವ ಅವರ ತಂದೆ ಮತ್ತು ಅವರ ಸಹೋದರ 2 ನೇ ಪ್ರತಿವಾದಿಯ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿ.ಪಿ-18 ಎ ಮತ್ತು ಬಿ ಎಂದು ಗುರುತಿಸಲಾಯಿತು. 5 ನೇ ಪ್ರತಿವಾದಿ ಎಷ್ಟು ಜಮೀನು ಖರೀದಿಸಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಜಮೀನು ಖರೀದಿಸಿದ್ದಾಳೆ ಎಂದು ನನ್ನ ದಾವೆಯಲ್ಲಿ ಮಾಹಿತಿ ನೀಡಿದ್ದೇನೆ. ಆ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ಖರೀದಿ ಪತ್ರಕ್ಕೆ ನಾನು, ಉಳಿದ ವಾದಿಯರು ಮತ್ತು ನನ್ನ ಸಹೋದರ 2 ನೇ ಪ್ರತಿವಾದಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಖರೀದಿ ಪತ್ರಕ್ಕೆ ನಾವು ಸಹಿ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಯ ಖರೀದಿ ಪತ್ರಕ್ಕೆ ನಾವು ಸಹಿ ಮಾಡಿಲ್ಲ ಎಂದು ನನ್ನ ಮುಖ್ಯ ವಿಚಾರಣೆ

ಪತ್ರದಲ್ಲಿ ಬರೆದಿಲ್ಲ. ಸಾಕ್ಷಿಗೆ ಅವರ ವಕೀಲರ ಮೂಲಕ ಸಲ್ಲಿಸಿದ ವಕಾಲತ್ ನಾಮಾವನ್ನು ತೋರಿಸಿ ಅದರಲ್ಲಿರುವ ಸಹಿಗಳು ತಮ್ಮ ಸಹಿ ಎಂದು ನೋಡಿ ಗುರುತಿಸಿರುತ್ತಾರೆ. ನಾನು ದಾವೆ ಸಲ್ಲಿಸುವಾಗ ವಕಾಲತ್ ನಾಮೆಯಲ್ಲಿ ಒಂದು ರೀತಿ ಸಹಿ ಮಾಡಿದ್ದೇನೆ ಮತ್ತು ಮೊದಲಿನ ವಕೀಲರ ಕಡೆಯಿಂದ ತಕರಾರು ಇಲ್ಲ ಎಂದು ಪಡೆದು ಈಗಿನ ವಕೀಲರ ಮೂಲಕ ಸಲ್ಲಿಸಿದ ವಕಾಲತ್ ನಾಮೆಯಲ್ಲಿ ಬೇರೆ ತರಹ ಸಹಿ ಮಾಡಿದ್ದೇನೆ. ಮೊದಲು ಚಿಕ್ಕ ರುಜು ಆನಂತರ ಉದ್ದ ರುಜು ಮಾಡಿದ್ದೇನೆ. ಆ ಎರಡು ಸಹಿಗಳು ನನ್ನ ಸಹಿ . ನಾವು ವಾದಿಯರು ವಕಾಲತ್ ನಾಮೆಗಳಲ್ಲಿ ಹಾಕಿದ ರುಜುಗಳು ಮತ್ತು 5 ನೇ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರದಲ್ಲಿ ಇರುವ ರುಜುಗಳು ಒಂದೇ ಇದ್ದರೂ ಸಹ ಖರೀದಿ ಪತ್ರದಲ್ಲಿರುವ ರುಜುಗಳು ನಮ್ಮವು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ದಾವೆಯಲ್ಲಿ ಕೇವಲ ಎರಡು ಮನೆಗಳನ್ನು ಸೇರಿಸಿದ್ದೇನೆ . ಇನ್ನೊಂದು ಮನೆ ಸೇರಿಸಿಲ್ಲ ಎಂದರೆ ಸಾಕ್ಷಿಯು ಸುಮ್ಮನೇ ನಿಂತಿರುತ್ತಾರೆ. ಸಾಕ್ಷಿ ಮುಂದುವರೆದು ಎರಡನೇಮನೆ ಸಂಖ್ಯೆ 554/2 ಎ/ಎ/2 ರ ಜೊತೆಗೆ ಇರುವ ಇನ್ನೊಂದು ಮನೆ ಎಂದು ನಾನು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಮನೆಗಳು ಇರುವ ಸ್ಥಳವನ್ನು ಶಾಂತೇಶ್ವರ ಓಣಿ ಎಂದು ಕರೆಯುತ್ತಾರೆ ಎಂದರೆ ಸರಿ . ದಾವಾಜಮೀನು ಇರುವ ಪ್ರದೇಶವನ್ನು ಜಯನಗರ ಎಂದು ಕರೆಯುತ್ತಾರೆ ಎಂದರೆ ಸರಿ . ಶಂತೇಶ್ವರ ಗುಡಿ ಇರುವ ಪ್ರದೇಶಕ್ಕೆ ಜಯನಗರ ಅನ್ನುವುದಿಲ್ಲ ಎಂದರೆ ಸರಿ .

ನನ್ನ ಮತ್ತು ನನ್ನ ದೊಡ್ಡಪ್ಪನ ಕುಟುಂಬಕ್ಕೆ ಒಟ್ಟು 30 ಎಕರೆ ಜಮೀನು. ಆ ಜಮೀನಿನ ಪೈಕಿ ನನ್ನ ತಂದೆಗೆ 14 ಎಕರೆ, ನನ್ನ ದೊಡ್ಡಪ್ಪನಿಗೆ 14 ಎಕರೆ ಮತ್ತು 2 ಎಕರೆ ಜಮೀನನ್ನು ನನ್ನ ಅಜ್ಜ ಇಟ್ಟುಕೊಂಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಅಜ್ಜ ಮೃತಪಟ್ಟ ನಂತರ ಆತನ ಹೆಸರಿಗೆ ಇಟ್ಟುಕೊಂಡ ಜಮೀನು ಯಾರಿಗೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜ ಮೃತಪಟ್ಟ ನಂತರ ಆತನ ಹೆಸರಿಗೆ ಇರುವ ಜಮೀನು ಯಾರಿಗೆ ಬಂತು ಎಂದು ದಾಖಲೆ ಹಾಜರುಪಡಿಸಿಲ್ಲ. 4 ನೇ ಪ್ರತಿವಾದಿ ಎಷ್ಟು ಎಕರೆ ಖರೀದಿಸಿದ್ದಾನೆ ಮತ್ತು ಯಾವಾಗ ಖರೀದಿಸಿದ್ದಾನೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ನನ್ನ ತಂದೆ ಜಮೀನು ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ನೋಡಿದಾಗ ಗೊತ್ತಾಗಿದೆ. ಯಾವ ಭಾಗದ ಜಮೀನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಹಣಕ್ಕೆ ಮಾರಾಟ ಮಾಡಿದಾ್ದ ಎಂದು ನನಗೆ ಗೊತ್ತಿಲ್ಲ.

3 ನೇ ಪ್ರತಿವಾದಿಗೆ ಯಾವ ಭಾಗದ ಮತ್ತು ಯಾವ ಚೆಕ್ಕುಬಂಧಿ ನಡುವಿನ ಜಮೀನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಗೆ ಜಮೀನು ನನ್ನ ತಂದೆ ಮಾರಾಟ ಮಾಡಿದ್ದಾರೋ ಅಥವಾ ಬೇರೆಯವರು ಮಾರಾಟ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಒಟ್ಟು 14 ಎಕರೆ ಜಮೀನಿನ ಪೈಕಿ ಯಾವ ಭಾಗದ ಜಮೀನು 6 ನೇ ಪ್ರತಿವಾದಿ ಖರೀದಿಸಿದ್ದಾರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ಯಾರಿಂದ ಜಮೀನು ಖರೀದಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಹಣಕ್ಕೆ ಮತ್ತು ಎಷ್ಟು ಕ್ಷೇತ್ರ ಖರೀದಿಸಿದ್ದಾನೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯು ಬೇರೆಯವರಿಂದ ಖರೀಸಿದ್ದಾನೆ. ನಮ್ಮ ತಂದೆಯವರಿಂದ ಖರೀದಿಸಿಲ್ಲ. 8 ನೇ ಪ್ರತಿವಾದಿಯು ಎಷ್ಟು ಹಣಕ್ಕೆ ಮತ್ತು ಎಷ್ಟು ಕ್ಷೇತ್ರ ಖರೀದಿಸಿದ್ದಾನೆ ನನಗೆ ಗೊತ್ತಿಲ್ಲ. ಅದೇ ರೀತಿ 9 ನೇ ಪ್ರತಿವಾದಿಯು ಎಷ್ಟು ಹಣಕ್ಕೆ , ಎಷ್ಟು ಕ್ಷೇತ್ರ ಮತ್ತು ಯಾರಿಂದ ಖರೀಸಿದ್ದಾನೆ ನನಗೆ ಗೊತ್ತಿಲ್ಲ.

6 ರಿಂದ 9 ನೇ ಪ್ರತಿವಾದಿಯು ಯಾರಿಂದ ಜಮೀನು ಖರೀದಿಸಿದ್ದಾರೆ ಅವರನ್ನು ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನಾಲ್ಕು ಬಾರಿ ಪ್ರಶ್ನೆ ಕೇಳಲಾಗಿ ಅದೇ ರೀತಿ ನ್ಯಾಯಾಲಯವು ಸಹ ಅದೇಪ್ರಶ್ನೆಯನ್ನು ಕೇಳಿದರೂ ಸಹ ಸಾಕ್ಷಿ ಯಾವುದೇ ಉತ್ತರ ನೀಡಿಲ್ಲ.

ದಾವಾಜಮೀನು ಒಟ್ಟು ಕ್ಷೇತ್ರ 14 ಎಕರೆ ಜಮೀನಿನ ಪೈಕಿ ಎಷ್ಟು ಜನ ಸ್ವಾಧೀನದಲ್ಲಿದ್ದುಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ಯಾರ ಹೆಸರಿನಲ್ಲಿ ಜಮೀನು ಇವೆಯೋ ಸ್ವಾಧೀನದಲ್ಲಿದ್ದುಕೊಂಡು ಉಳುಮೆ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಿಮಗೆ ಗೊತ್ತೇ ಎಂದು ವಕೀಲರನ್ನೇ ಪ್ರಶ್ನಿಸಿ ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ದಾವಾಜಮೀನುಗಳು ಯಾರ ಹೆಸರಿನಲ್ಲಿ ಇವೆಯೋ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ .

ನಿ.ಪಿ-1 ರಲ್ಲಿರುವ ಯಾಶೀರ ಅರಾಫತ್ ರವರನ್ನು ಈ ದಾವೆಯಲ್ಲಿಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ( ಈ ಪ್ರಶ್ನೆಗೆ ವಾದಿಪರ ವಕೀಲರು ಪಕ್ಷಗಾರರನ್ನು ಸೇರಿಸಿಲ್ಲ ಎನ್ನುವ ಪ್ರತಿವಾದ ಇರುವುದಿಲ್ಲ ಹಾಗೂ ಆ ಬಗ್ಗೆ ವಿವಾದಾಂಶ ಇರದೇ ಇರುವ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಕರಾರು ಎತ್ತಿರುತ್ತಾರೆ. 3 ನೇ ಪ್ರತಿವಾದಿ ಪರ ವಕೀಲರು 3 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ 4 ನೇ ಖಂಡಿಕೆಯಲ್ಲಿ ಆ ಬಗ್ಗೆ ಉಲ್ಲೇಖವಿದೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯ ಪ್ರತಿವಾದ ಪತ್ರದ 4 ನೇ ಖಂಡಿಕೆಯನ್ನು ನೋಡಲಾಗಿ ದಾವೆ ಸಲ್ಲಿಸುವಾಗಾ ಮಾರಾಟ ಮಾಡಿದ 5 ಎಕರೆ ಜಮೀನು 1 ಮತ್ತು 2

ನೇಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ ಎನ್ನುವ ಉಲ್ಲೇಖವಿದೆ. ಆದರೆ ಅವಶ್ಯಕ ಪಕ್ಷಗಾರರನ್ನು ಸೇರಿಸಿಲ್ಲ ಎನ್ನುವ ಯಾವುದೇ ಉಲ್ಲೇಖ ಇರದ ಕಾರಣ 3 ನೇ ಪ್ರತಿವಾದಿ ಪರ ವಕೀಲರ ಮನವಿಯನ್ನು ತಿರಸ್ಕರಿಸಿದೆ. )

ಉದ್ದೇಶಪೂರ್ವಕವಾಗಿ ಯಾಶೀನ ಅರಾಫತ್ ರವರನ್ನು ದಾವೆಯಿಂದ ಕೈ ಬಿಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾಜಮೀನು ಈ ದಾವೆಯನ್ನು ಸಲ್ಲಿಸುವಾಗ ಯಾಶೀನ ಅರಾಫತ್ ರವರ ಹೆಸರಿನಲ್ಲಿದ್ದು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸುಮ್ಮನೇ ನಿಂತಿರುತ್ತಾರೆ. ದಾವಾ ಜಮೀನು ಮಾರಾಟ ಮಾಡುವಾಗ ಒಣ ಬೇಸಾಯದ ಜಮೀನು ಇತ್ತೋ ಅಥವಾ ನೀರಾವರಿ ಜಮೀನು ಇತ್ತೊ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದು ಫಲ ಕೊಡುವ ಜಮೀನು ಇತ್ತು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ಜಮೀನು ಖರೀದಿಸಿದ ನಂತರ ಅದರಲ್ಲಿ ಕೊಳವೆ ಬಾವಿ ಕೊರೆಯಿಸಿ ಸಾಕಷ್ಟು ಹಣ ಖರ್ಚು ಮಾಡಿ ಧ್ರಾಕ್ಷಿ ಬೆಳೆ ಬೆಳೆಯುತ್ತಿದ್ದಾನೆ ಎಂದರೆ ಸಾಕ್ಷಿಯು ಅದು ಸಾಕಷ್ಟು ಫಲ ಕೊಡುವ ಜಮೀನು ಇತ್ತು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ಖರೀದಿಸಿದ ಜಮೀನಿನಲ್ಲಿ ಧ್ರಾಕ್ಷಿ ಬೆಳೆ ಬೆಳೆಯುತ್ತಿದ್ದಾನೆ ಎಂದರೆ ಈಗ ಬೆಳೆದಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

ನಮ್ಮ ಮದುವೆ, ನಮ್ಮ ಶಿಕ್ಷಣ ಮತ್ತು ನಮ್ಮ ಮನೆತನದ ವ್ಯವಹಾರವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ . ನಮ್ಮ ಮದುವೆ ನನ್ನ ತಂದೆ ಮಾಡಿದ್ದಾರೆ ಎಂದರೆ ಸರಿ . ನಮ್ಮ ಮದುವೆಯ ಖರ್ಚು ವೆಚ್ಚವನ್ನು ನನ್ನ ತಂದೆ ಮಾಡಿದ್ದಾರೆ ಎಂದರೆ ಸರಿಯಲ್ಲ . ನನ್ನ ತಾಯಿಯ ತವರು ಮನೆಯವರು ಮಾಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾಯಿಗೆ ಯಾವುದೇ ಸಹೋದರರು ಇಲ್ಲ ಎಂದರೆ ಸರಿಯಲ್ಲ. ನಮ್ಮ ಮದುವೆ ಖರ್ಚನ್ನು ನನ್ನ ತಾಯಿಯ ತವರು ಮನೆಯವರು ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮದುವೆ , ನಮ್ಮ ಶಿಕ್ಷಣ ಮತ್ತು ದಾವಾ ಮನೆಗಳನ್ನು ಕಟ್ಟಲು ನಮ್ಮ ತಂದೆಗೆ ಹಣಕಾಸಿನ ಅಡಚಣೆ ಇದ್ದ ಕಾರಣ ಕಾಲಕಾಲಕ್ಕೆ ದಾವಾ ಜಮೀನುಗಳನ್ನು ಮಾರಾಟ ಮಾಡುತ್ತಾ ಬಂದಿದ್ದಾನೆ ಎಂದರೆ ಸರಿಯಲ್ಲ.

ದಾವಾ ಜಮೀನುಗಳು ಮಾರಾಟ ಮಾಡಿದ 15 ವರ್ಷಗಳ ನಂತರ ನಮ್ಮ ತಂದೆ ಮೃತ ಪಟ್ಟಿದ್ದಾನೆ. ದಾವಾ ಜಮೀನುಗಳನ್ನು ಈಗಾಗಲೇಮಾರಾಟ ಮಾಡಿದ ಬಗ್ಗೆ ನಮಗೆ ಗೊತ್ತಿದ್ದರೂ ಸಹ

ನಾನು ಮತ್ತು ನನ್ನ ಸಹೋದರ ಮಿಲಾಪಿಯಾಗಿ ಖರಿಸಿದವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯು ಜಮೀನು ಖರೀದಿಸುವ ಮುಂಚೆ ನಮ್ಮ ಮನೆಯಲ್ಲಿ ಖರೀದಿ ಮಾತುಕತೆಯಾಗಿದೆ ಎಂದರೆ ಸರಿಯಲ್ಲ. ನನ್ನನ್ನು ನನ್ನ ತಾಯಿಯ ತವರೂರಿಗೆ ಮದುವೆ ಮಾಡಿಕೊಟ್ಟಿದ್ದಾರೆ. ನನ್ನ ಗಂಡ ನನ್ನ ತಾಯಿಯ ಅಣ್ಣನ ಮಗ . ನಾನು ಎಂದೂ ಇಂಡಿಯಲ್ಲಿ ಇಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ತವರು ಮನೆಗೆ ಆಗಾಗ ಬಂದು ಹೋಗುತ್ತಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಹೋದರಿ ಮತ್ತು ನನ್ನ ತಾಯಿ ಇಂಡಿಯಲ್ಲಿಯೇ ಇರುತ್ತಿದ್ದರು ಎಂದರೆ ಸರಿ . ನಾವೆಲ್ಲರೂ ಒಂದೇ ಮನೆಯಲ್ಲಿ ಇದ್ದರೂ ಸಹ ನಾನು ನನ್ನ ತಾಯಿಯ ತವರು ಮನೆಯಲ್ಲಿ ಇರುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯು 2005-06 ನೇ ಸಾಲಿನಲ್ಲಿ ಜಮೀನು ಖರೀದಿಸಿದ್ದಾನೆ ಆಗಿನಿಂದ ಇಲ್ಲಿಯವರೆಗೂ ಆತನೇ ಸ್ವಾಧೀನದಲ್ಲಿದ್ದಾನೆ ಎಂದರೆ ಸರಿ . ಈ ದಾವೆ ಸಲ್ಲಿಸುವ ಮುಂಚೆ 3 ನೇ ಪ್ರತಿವಾದಿಯ ಖರೀದಿ ಪತ್ರವನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ಖರೀದಿ ಮಾತುಕತೆ ನಮ್ಮ ಮನೆಯಲ್ಲಿಯೇ ಆಗಿದೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಈ ಬಗ್ಗೆನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯು ನನ್ನ ತಂದೆ ಮತ್ತು ನನ್ನ ಸಹೋದರನಿಗೆ ಮೋಸ ಮಾಡಿ ಖರೀದಿಸಿದ್ದಾನೆ ಎಂದು ನನ್ನ ದಾವೆಯಲ್ಲಿ ಬರೆದಿಲ್ಲ .ಆದರೆ ನನ್ನ ತಂದೆ ಮತ್ತು ಸಹೋದರ ನಮಗೆ ಮೋಸ ಮಾಡಿ ಮಾರಾಟ ಮಾಡಿದ್ದಾರೆ ಎಂದು ಬರೆಸಿದ್ದೇನೆ. ಈ ದವೆಸಲ್ಲಿಸಲು ನಮಗೆ ಯಾವುದೇ ಕಾರಣವಿಲ್ಲದಿದ್ದರೂ ಹಾಗೂ ನಮ್ಮ ದಾವೆಯು ಕಾಲಮಿತಿಯಿಂದ ಭಾದಕವಾಗಿದ್ದರೂ ಸಹ ಪ್ರತಿವಾದಿಯರನ್ನು ಕಾಡಬೇಕು ಎಂಬ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮತಂದೆ ದಾವಾ ಜಮೀನನ್ನು ಮಾರಾಟ ಮಾಡಿದ ಬಗ್ಗೆ ಯಾವಾಗ ಗೊತ್ತಾಯಿತು ಎಂದು ದಾವೆಯಲ್ಲಿ ಬರೆಸಿದ್ದೇನೆ. ಈ ದಾವೆ ಸಲ್ಲಿಸುವ ಮುಂಚೆ ಖರೀದಿ ಪತ್ರವನ್ನು ರದ್ದುಪಡಿಸುವಂತೆ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತು ನನ್ನ ಅಜ್ಜನಿಗೆ ಯಾವ ರೀತಿ ಬಂತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ . ದಾವಾಆಸ್ತಿಗಳು ನನ್ನ ಅಜ್ಜನಿಗೆ ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲಲ. ಸಾಕ್ಷಿ ಮುಂದುವರೆದು, ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದು ನುಡಿಯುತ್ತಾರೆ. ದಾವಾಸ್ವತ್ತು ಪಿತ್ರಾರ್ಜಿತ ಸ್ವತ್ತು ಅಲ್ಲದ ಕಾರಣ ಅವುಗಳಲ್ಲಿ ನಮಗೆ ಯಾವುದೇ ರೀತಿ ಭಾಗವಿಲ್ಲಎಂದು ಗೊತ್ತಿದ್ದರೂ ಸಹ ಪ್ರತಿವಾದಿಯರನ್ನು ಕಾಡಬೇಕು ಎಂಬ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಿಂದಃ**

5 ನೇ ಪ್ರತಿವಾದಿ ಮತ್ತು ಅವರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರಾಗಿ ಅವರ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿಸಿತು.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ.ಸಿ**
**ಇಂಡಿ.**